ಈ) ಖರೀದಿ ಮಾಡಿರುವ ಸೈಕಲ್‌ಗಳ ಗುಣಮಟ್ಟವನ್ನು ರಿಸರ್ಚ್ ಆಂಡ್ ಡೆವಲಪ್ ಮೆಂಟ್ ಸೆಂಟರ್ ಫಾರ್ ಬೈಸಿಕಲ್ & ಸೀವಿಂಗ್ ಮೆಷನ್, ಲೂಧಿಯಾನ ಸಂಸ್ಥೆಯವರಿಂದ ಪರೀಕ್ಷೆಗೊಳಪಡಿಸಲಾಗಿದೆ ಹಾಗೂ ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ (ಶಿಕ್ಷಣ ಇಲಾಖೆಯಿಂದ ಇಬ್ಬರು ಮತ್ತು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯಿಂದ ಇಬ್ಬರು) ತಾಂತ್ರಿಕ ಸಮಿತಿಗಳನ್ನು ರಚಿಸಿ ವಿಷ್ಯುಯಲ್ ತಪಾಸಣೆ ಮಾಡಲು ತರಬೇತಿಯನ್ನು ಸಹ ನೀಡಲಾಗಿದೆ ಪ್ರತಿ ಸೈಕಲ್‌ನ ಬೆಲೆ ರೂ 2030 ಕ್ಕೆ ಇರುತ್ತದೆ ಬೈಸಿಕಲ್ ಮಾಡಲ್ IS 10613–2004 ಆಗಿರುತ್ತದೆ

ಉ) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ರೂ 25 ಕೋಟಿ ಮತ್ತು ಶಿಕ್ಷಣ ಇಲಾಖೆಯಿಂದ ರೂ 10 74 ಕೋಟಿಯನ್ನು ಸರ್ಕಾರ ಬಿಡುಗಡೆ ಮಾಡಿದೆ

**447 ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ** : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲಿಂಗಸುಗೂರು ತಾಲ್ಲೂಕಿನ ಚಿಕ್ಕುಪ್ಪೇರಿ ಹಾಗೂ ಸುಣಕಲ್ ಗ್ರಾಮಗಳು ಕೃಷ್ಣಾ ಮೇಲ್ದಂಡೆ ಯೋಜನೆಯ ಹಿನ್ನೀರಿನಿಂದ ಮುಳುಗಡೆಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಬಂದಿದ್ದಲ್ಲಿ ಈ ಗ್ರಾಮಗಳ ಸ್ಥಳಾಂತರಕ್ಕೆ ಸರ್ಕಾರ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆಯೆ,

ಇ) ಹಾಗಿದ್ದಲ್ಲಿ ಆ ಕ್ರಮ ಈಗ ಯಾವ ಹಂತದಲ್ಲಿದೆ,

ಈ) ಸದರಿ ಗ್ರಾಮಗಳ ಸ್ಥಳಾಂತರದ ಯೋಜನೆಗೆ ತಗಲುವ ಅಂದಾಜು ವೆಚ್ಚವೆಷ್ಟು?

**ಶ್ರೀ ಕೆ ಎಸ್ ಈಶ್ವರಪ್ಪ (ಜಲಸಂಪನ್ಮೂಲ ಸಚಿವರು)**

ಅ) ಲಿಂಗಸುಗೂರು ತಾಲ್ಲೂಕಿನ ಚಿಕ್ಕುಪ್ಪೇರಿ ಹಾಗೂ ಸುಣಕಲ್ ಗ್ರಾಮಗಳ ಕೃಷ್ಣಾ ಮೇಲ್ದಂಡೆ ಯೋಜನೆಯ ಹಿನ್ನೀರಿನಿಂದ ಮುಳುಗಡೆ ಯಾಗುವುದಿಲ್ಲ ಆದರೆ ನಾರಾಯಣಪುರ ಬಲದಂಡೆ ಕಾಲುವೆ ಅಚ್ಚುಕಟ್ಟು ಪ್ರದೇಶದಲ್ಲಿ ಸದರಿ ಗ್ರಾಮಗಳು ಕೆಳಮಟ್ಟದಲ್ಲಿರುವುದರಿಂದ ಬಿಸಿನೀರಿನಿಂದ ಬಾಧಿತವಾಗಿರುತ್ತದೆ

ಆ) ಇ) ಮತ್ತು ಉ) ಸದರಿ ಗ್ರಾಮಗಳ ಸ್ಥಳಾಂತರಕ್ಕಾಗಿ ರೂ 6 09 ಕೋಟಿ ಮೊತ್ತದ ಪ್ರಸ್ತಾವನೆಯನ್ನು ಕೃಷ್ಣಾ ಭಾಗ್ಯ ಜಲ ನಿಗಮದಿಂದ ಸರ್ಕಾರಕ್ಕೆ ದಿ 16/12/2005 ರಂದು ಸಲ್ಲಿಸಲಾಗಿತ್ತು ಜಲ ಸಂಪನ್ಮೂಲ ಇಲಾಖೆಯಲ್ಲಿ

ಕಂದಾಯ ಇಲಾಖೆ ಮತ್ತು ಆರ್ಥಿಕ ಇಲಾಖೆಗಳೊಂದಿಗೆ ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿರುತ್ತದೆ ಈಗ ಅನುಸರಿಸುತ್ತಿರುವ ಪುನರ್ವಸತಿ ಮತ್ತು ಪುನರ್ ನಿರ್ಮಾಣ ನಿಯಮಗಳ ಬದಲಾವಣೆಯಾಗುವುದನ್ನು ಗಮನಿಸಿ, ಸದರಿ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಪರಿಗಣಿಸಿರುವುದಿಲ್ಲ, ಈಗ ಸದರಿ ಗ್ರಾಮಗಳು ಶೀತಪೀಡಿತ ಸಮಸ್ಯೆಗೊಳಗಾಗಿರುವುದರಿಂದ ಇದನ್ನು ಪುನಃ ಪರಿಶೀಲಿಸಿ ಪರ್ಯಾಯ ಕ್ರಮ ಕೈಗೊಳ್ಳುವ ಕುರಿತು ಪ್ರಸ್ತಾವನೆಯನ್ನು ಸಲ್ಲಿಸುವಂತೆ ದಿ 1/2/2007 ರಂದು ನಿಗಮಕ್ಕೆ ತಿಳಿಸಲಾಗಿದೆ

**288 (835) ಶ್ರೀ ಅಂಜನಾಮೂರ್ತಿ (ನೆಲಮಂಗಲ)** : ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2006–07ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆಗೆ ಬಿಡುಗಡೆ ಮಾಡಲಾದ ಹಣವೆಷ್ಟು,

ಆ) ಈ ರೀತಿ ಬಿಡುಗಡೆಯಾದ ಒಟ್ಟು ಹಣದಲ್ಲಿ ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿರುತ್ತದೆ? ತಾಲ್ಲೂಕುವಾರು ಮಾಹಿತಿ ನೀಡುವುದು?

**ಮಾನ್ಯ ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು)**:

(ರೂ ಲಕ್ಷಗಳಲ್ಲಿ)

| ಲೆಕ್ಕ ಶೀರ್ಷಿಕೆ | ಆರ್ಥಿಕ ಇಲಾಖೆಯಿಂದ ಬಿಡುಗಡೆಯಾದ ಹ ಭ ಪತ್ರ |
|---|---|
| ಅ ಕಟ್ಟಡಗಳು (ಯೋಜನೆ | |
| 2059 ಯೋಜನೆ | 128 00 |
| 2216 ಯೋಜನೆ | 118 70 |
| 4059 ಲೋಇ ಯೋಜನೆ | 6690 58 |
| 4059 ಉಚ್ಚ ನ್ಯಾಯಾಲಯ ಸಂಚಾರಿ ಪೀಠ | 500 00 |
| 4216 ವಸತಿ | 521 69 |
| ಒಟ್ಟು | 7958 97 |
| ಆ ರಸ್ತೆ ಮತ್ತು ಸೇತುವೆ | |
| 5054 ರಸ್ತೆ ಮತ್ತು ಸೇತುವೆ (ORF) | 4701 15 |
| 5054 ತುರ್ತು ಕಾಮಗಾರಿಗಳು & ಭೂಸ್ವಾಧೀನ | 1787 62 |